**ಮೇಃ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ**

ಸಿ.ಸಿ ನಂ.576/2016

ಸಿಡ್ಯೂಲ್ -2

| | |
|---|---|
| ಹೆಸರು | ರವಿ ಗೊನ್ಯಾಗೋಳ |
| ತಂದೆ/ಗಂಡ ಯ ಹೆಸರು | ರಂಗಪ್ಪ |
| ವಯಸ್ಸು | 37 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ನಾಗರಾಳ |

**ದಿನಾಂಕಃ 21-10-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರಿ. ಎ.ಎಸ್.ವಾಯ್, ಪಿರ್ಯಾದಿದಾರ ಪರ ವಕೀಲರಿಂದ ಃ**

ಪ್ರಕರಣದ ಆರೋಪಿ ಮತ್ತು ಪಿರ್ಯಾದಿದಾರನ ಪರಿಚಯ ಇದೆ. ಅವರಿಬ್ಬರೂ ಖಾಸ ಅಣ್ಣತಮ್ಮಂದಿರು. ಪಿರ್ಯಾದಿದಾರನ ಹೊಲದ ಸರ್ವೆ ನಂಬರ ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ ಆ ಜಮೀನನ್ನು ನಾನು ನೋಡಿದ್ದೇನೆ. ಅದೇ ರೀತಿ ಆರೋಪಿತರ ಜಮೀನು ಸಹ ನಾನು ನೋಡಿರುತ್ತೇನೆ.

ಸನ್ 2015 ರಂದು ಪ್ರಕರಣದ ಆರೋಪಿತರ ಮತ್ತು ಪಿರ್ಯಾದಿದಾರನ ಮಧ್ಯ ದಾರಿಯ ವಿಷಯಕ್ಕೆ ಜಗಳ ಆಗಿತ್ತು. ನಾನು ಆ ದಿನ ನನ್ನ ಕಾಕಾನ ಹೊಲಕ್ಕೆ ಹೋಗಿ ಬರುವಾಗ ಸದರಿ ಜಗಳ ನಡೆಯುತ್ತಿತ್ತು. ಜಗಳ ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಆರೋಪಿತರಿಬ್ಬರೂ ಪಿರ್ಯಾದಿದಾರನಿಗೆ ಜಗ್ಗಾಡಿ ಬೈದಾಡುತ್ತಿದ್ದದನ್ನು ನಾನು ನೋಡಿ ಜಗಳ ಬಿಡಿಸಿ ಇಬ್ಬರನ್ನು ಮನೆಗೆ ಕಳುಹಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿಪರ ವಕೀರಿಂದಃ

ಪ್ರಕರಣದ ಪಿರ್ಯಾದಿದಾರ ಮತ್ತು ನಾನು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆರೋಪಿ ಮತ್ತು ಪಿರ್ಯಾದಿದಾರ ಖಾಸ ಅಣ್ಣತಮ್ಮಂದಿರು ಎಂದರೆ ಸರಿ. ಅವರಿಬ್ಬರ ಮಧ್ಯ ಸಿವಿಲ್ ವ್ಯಾಜ್ಯಗಳು ಚಾಲ್ತಿಯಲ್ಲಿವೆ ಎಂದರೆ ಸರಿ. ಪಿರ್ಯಾದಿದಾರ ಈಗ ತನ್ನ ಜಮೀನಿನ ರಸ್ತೆಯಿಂದ ಹಾಯ್ದದಾಡುತ್ತಾನೆ. ಇದೇ ನ್ಯಾಯಾಲಯದಲ್ಲಿ ಆರೋಪಿ ಮತ್ತು ಪಿರ್ಯಾಧಿದಾರನ ಮಧ್ಯ ಸಿಸಿ ನಂ.238/2016 ಜಾಲ್ತಿಯಲಿದೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾನು ಪ್ರತ್ಯಕ್ಷ ಸಾಕ್ಷಿದಾರನನಾಗಿದ್ದೇನೆ ಎಂದರೆ ಸರಿ.

ಪ್ರಕರಣದ ಆರೋಪಿ ಮತ್ತು ಪಿರ್ಯಾದಿದಾರನ ಪರಿಚಯ ಇದೆ. ಅವರಿಬ್ಬರೂ ಖಾಸ ಅಣ್ಣತಮ್ಮಂದಿರು. ಪಿರ್ಯಾದಿದಾರನ ಹೊಲದ ಸರ್ವೆ ನಂಬರ ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ ಆ ಜಮೀನನ್ನು ನಾನು ನೋಡಿದ್ದೇನೆ. ಅದೇ ರೀತಿ ಆರೋಪಿತರ ಜಮೀನು ಸಹ ನಾನು ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸನ್ 2015 ರಂದು ಪ್ರಕರಣದ ಆರೋಪಿತರ ಮತ್ತು ಪಿರ್ಯಾದಿದಾರನ ಮಧ್ಯ ದಾರಿಯ ವಿಷಯಕ್ಕೆ ಜಗಳ ಆಗಿತ್ತು. ನಾನು ಆ ದಿನ ನನ್ನ ಕಾಕಾನ ಹೊಲಕ್ಕೆ ಹೋಗಿ ಬರುವಾಗ ಸದರಿ ಜಗಳ ನಡೆಯುತ್ತಿತ್ತು.

ಜಗಳ ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಆರೋಪಿತರಿಬ್ಬರೂ ಪಿರ್ಯಾದಿದಾರನಿಗೆ ಜಗ್ಗಾಡಿ ಬೈದಾಡುತ್ತಿದ್ದದನ್ನು ನಾನು ನೋಡಿ ಜಗಳ ಬಿಡಿಸಿ ಇಬ್ಬರನ್ನು ಮನೆಗೆ ಕಳುಹಿಸಿರುತ್ತೇನೆ ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ